ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು.

**ಓದಿದೆ:**

1. ನಿಗಮ ಆದೇಶ ಸಂಖ್ಯೆ: ಬಿ5ಎ/67275/2017-18 ದಿನಾಂಕ: 11.08.2017.
2. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಕಲಬುರಗಿ ರವರ ಪತ್ರ ಸಂಖ್ಯೆ: ಮುಇಂ(ವಿ)/ಪ್ರವಕ/ಲೆನಿಅ/ಲೆಅ/ಸಲೆಅ/ಹಿಸ/ಕ-2/2021-22/1064-65 ದಿನಾಂಕ: 30.04.2021.
3. ದಿನಾಂಕ: 18.11.2021 ರಂದು ನಡೆದ 126 ನೇ ನಿಗಮದ ಮಂಡಳಿಯ ನಿರ್ದೇಶಕರು ಗಳ ಸಭೆಯ ಠರಾವು ಸಂಖ್ಯೆ: 126/46.

**ಪೀಠಿಕೆ:** ಮುನಿರಾಬಾದ್ ಪ್ರಸರಣ(ಕಾಮಗಾರಿ ಮತ್ತು ನಿರ್ವಹಣೆ) ವೃತ್ತದ ಟಿ.ಎಲ್ & ಎಸ್.ಎಸ್ ವಿಭಾಗ ಲಿಂಗಸೂಗೂರು ಕಾರ್ಯವ್ಯಾಪ್ತಿಯ ಸಿಂಧನೂರು ಟಿ.ಎಲ್.ಎಂ.ಉಪ-ವಿಭಾಗದ ವ್ಯಾಪ್ತಿಯ ಸಿಂಧನೂರು ಟಿ.ಎಲ್.ಎಂ. ಶಾಖೆಯ ಕಾರ್ಯವ್ಯಾಪ್ತಿಯು ಬಹಳ ವಿಸ್ತಾರವಾಗಿದ್ದು, ಸಂಪೂರ್ಣ ಕೊಪ್ಪಳ ಜಿಲ್ಲೆಯನ್ನು ಮತ್ತು ರಾಯಚೂರು ಜಿಲ್ಲೆಯ ಸಿಂಧನೂರು ಹಾಗೂ ಮಾನ್ವಿ ತಾಲ್ಲೂಕು ಗಳನ್ನು ಒಳಗೊಂಡಿರುತ್ತದೆ. ಸಿಂಧನೂರು ಟಿ.ಎಲ್.ಎಂ ಶಾಖೆಯು ಕುಷ್ಟಗಿಯ 220 ಕೆವಿ ವಿದ್ಯುತ್ ಕೇಂದ್ರದಿಂದ ಆರಂಭಗೊಳ್ಳುವ ಎಲ್ಲಾ ಪ್ರಸರಣ ಮಾರ್ಗಗಳ ನಿರ್ವಹಣೆಯನ್ನು ಮಾಡುತ್ತಿದ್ದು, ವಿದ್ಯುತ್ ಪ್ರಸರಣ ಮಾರ್ಗಗಳಲ್ಲಿ ತೊಂದರೆಯಾದಾಗ ದುರಸ್ತಿ ಮಾಡಬೇಕಾದ ಸಂದರ್ಭಗಳಲ್ಲಿ ಸಿಂಧನೂರು ಟಿ.ಎಲ್.ಎಂ ಶಾಖೆಯ ನಿರ್ವಹಣಾ ಸಿಬ್ಬಂದಿಯು ಸುಮಾರು 70 ಕಿಮೀ ಗಳವರೆಗೆ ಸಿಬ್ಬಂದಿ ಮತ್ತು ಅವಶ್ಯವಿರುವ ಸಾಮಗ್ರಿಗಳೊಂದಿಗೆ ದುರಸ್ತಿ ಸ್ಥಳಕ್ಕೆ ಪ್ರಯಾಣಿ ಸಬೇಕಿರುವುದರಿಂದ, ವಿದ್ಯುತ್ ಪೂರೈಕೆಯನ್ನು ಒದಗಿಸಲು ವಿಳಂಬವಾಗುತ್ತಿದ್ದು, ವಿದ್ಯುತ್ ಗ್ರಾಹಕರಿಗೆ ಮತ್ತು ಸೋಲಾರ್ ಹಾಗೂ ಪವನ ವಿದ್ಯುತ್ ಸ್ಥಾವರಗಳಿಗೆ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ, ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಕಲಬುರಗಿ ರವರು ದಿನಾಂಕ: 30.04.2021 ರ ಪತ್ರದಲ್ಲಿ ಮುನಿರಾಬಾದ್ ಪ್ರಸರಣ(ಕಾಮಗಾರಿ ಮತ್ತು ನಿರ್ವಹಣೆ) ವೃತ್ತದ ಲಿಂಗಸೂಗೂರು ಟಿ.ಎಲ್& ಎಸ್.ಎಸ್ ವಿಭಾಗದ ವ್ಯಾಪ್ತಿಯ ರಾಯಚೂರು ಟಿ.ಎಲ್.ಎಂ.ಉಪ ವಿಭಾಗಕ್ಕೆ ಮಂಜೂರಾಗಿದ್ದ ಹುದ್ದೆಗಳಲ್ಲಿ 22 ವಿವಿಧ ಹುದ್ದೆಗಳನ್ನು ಸ್ಥಳಾಂತರಿಸುವ ಮೂಲಕ ಕುಷ್ಟಗಿಯಲ್ಲಿ ಒಂದು ಟಿ.ಎಲ್.ಎಂ ಶಾಖೆಯನ್ನು ಹೊಸದಾಗಿ ರಚಿಸಲು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ, ವಿಷಯವನ್ನು ದಿನಾಂಕ: 18.11.2021 ರಂದು ನಡೆದ 126 ನೇ ನಿಗಮದ ಮಂಡಳಿಯ ನಿರ್ದೇಶಕರುಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಈ ಕೆಳಕಂಡ ಆದೇಶ.

---

**ನಿಗಮ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ5ಎ/67275/2017-18**

**ಬೆಂಗಳೂರು, ದಿನಾಂಕ:** 24 FEB 2022

ನಿಗಮವು ಈ ಕೆಳಕಂಡ ವಿಷಯಗಳಲ್ಲಿ ಅನುಮೋದನೆಯನ್ನು ನೀಡಿದೆ:

1. ಕಲಬುರಗಿ ಪ್ರಸರಣ ವಲಯದ ಮುನಿರಾಬಾದ್ ಪ್ರಸರಣ(ಕಾಮಗಾರಿ ಮತ್ತು ನಿರ್ವಹಣಾ) ವೃತ್ತದ ಲಿಂಗಸೂಗೂರು ಟಿ.ಎಲ್ & ಎಸ್.ಎಸ್ ವಿಭಾಗದ ಕಾರ್ಯವ್ಯಾಪ್ತಿಯ ಕುಷ್ಟಗಿಯಲ್ಲಿ ಹೊಸದಾಗಿ ಟಿ.ಎಲ್.ಎಂ ಶಾಖೆಯನ್ನು ಈ ಕೆಳಕಂಡ 22 ವಿವಿಧ ಹುದ್ದೆಗಳನ್ನು ರಾಯಚೂರು ಟಿ.ಎಲ್.ಎಂ.ಉಪ ವಿಭಾಗದಿಂದ ಸ್ಥಳಾಂತರಿಸುವ ಮೂಲಕ ರಚಿಸಲಾಗಿದೆ:

| ಕ್ರ ಸಂ. | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 01. | ಕಿರಿಯ ಇಂಜಿನಿಯರ್(ವಿ) | 01 |
| 02. | ಸೀನಿಯರ್ ಮೆಕಾನಿಕ್ | 01 |
| 03. | ಲೈನ್ ಮೆಕಾನಿಕ್ ದರ್ಜೆ-1 | 02 |
| 04. | ಲೈನ್ ಮೆಕಾನಿಕ್ ದರ್ಜೆ-2 | 02 |
| 05. | ಪವರ್ ಮ್ಯಾನ್ | 11 |
| 06 | ಸಹಾಯಕ ಪವರ್ ಮ್ಯಾನ್ | 05 |
| | **ಒಟ್ಟು** | **22** |

2. ಹೊಸದಾಗಿ ರಚಿಸಿದ ಕುಷ್ಟಗಿ ಟಿ.ಎಲ್.ಎಂ ಶಾಖೆಗೆ ಅವಶ್ಯವಿರುವ ಕಟ್ಟಡವನ್ನು ನಿಗಮದಲ್ಲಿ ಹಾಲಿ ಚಾಲ್ತಿಯಲ್ಲಿರುವ ನಿಯಮಗಳನ್ನು ಅನುಸರಿಸಿ ಬಾಡಿಗೆಗೆ ಪಡೆದು ಉಪಯೋಗಿಸಲು ಅನುಮೋದನೆಯನ್ನು ನೀಡಿದೆ.

3. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಕಲಬುರಗಿ ರವರು ಹೊಸದಾಗಿ ರಚಿಸಿದ ಕುಷ್ಟಗಿ ಟಿ.ಎಲ್.ಎಂ ಶಾಖೆಗೆ ಅವಶ್ಯವಿರುವ ಪೀಠೋಪಕರಣಗಳು, ಕಛೇರಿ ಸಾಮಗ್ರಿಗಳು, ಕಂಪ್ಯೂಟರ್‌ಗಳು ಮತ್ತು ಇತರೇ ಆಡಳಿತಾತ್ಮಕ ವೆಚ್ಚಗಳ ವಿಷಯದಲ್ಲಿ ನಿಗಮದಲ್ಲಿ ಹಾಲಿ ಚಾಲ್ತಿಯಲ್ಲಿರುವ ನಿಯಮಗಳಂತೆ, ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಪ್ರತ್ಯೇಕ ಪ್ರಸ್ತಾವನೆಯನ್ನು ಸಲ್ಲಿಸುವುದು.

ಆದೇಶದ ಮೇರೆಗೆ,

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**

<u>ಪ್ರತಿಗಳು ಮಾಹಿತಿಗಾಗಿ:</u>
1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), /ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಸ್ಕಾಂ.
4. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾ.ಸಂ.) ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>**

5. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
7. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
8. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಗಳು ಮಾಹಿತಿಗಾಗಿ:</u>
1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಮತ್ತು ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಮತ್ತು ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ./ಎಸ್ಕಾಂ ಪ.ಜಾ./ಪ.ಪಂ.ಅಧಿಕಾರಿಗಳ ಸಂಘ, ಬೆಂಗಳೂರು.